ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೫

**ಪಟ್ಟಿ–೧೦**

# ಕರ್ನಾಟಕ ವಿಧಾನ ಪರಿಷತ್ತು

## ನೂರ ಐವತ್ತೆಂಟನೆಯ ಅಧಿವೇಶನ
## (ಮುಂದುವರೆದ ಉಪವೇಶನಗಳು)

**ಸೋಮವಾರ, ದಿನಾಂಕ : ೧೬ನೇ ಮಾರ್ಚ್, ೨೦೨೬**

---

**ಸಮೂಹ – I**

೧. ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು
೨. ಇಂಧನ ಸಚಿವರು
೩. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು
೪. ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು
೫. ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು
೬. ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು
೭. ಉನ್ನತ ಶಿಕ್ಷಣ ಸಚಿವರು

---

## ಕಿದ್ವಾಯಿ ಸಂಸ್ಥೆಯ ಶಾಖೆಗಳನ್ನು ತುಮಕೂರು ಮತ್ತು ಮೈಸೂರಿನಲ್ಲಿ ಪ್ರಾರಂಭಿಸುವ ಬಗ್ಗೆ

**ಡಾ: ಆರತಿ ಕೃಷ್ಣ (ನಾಮನಿರ್ದೇಶನ ಹೊಂದಿದವರು) –**

೧೩೬ (೧೩೭೯) ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕ್ಯಾನ್ಸರ್ ಖಾಯಿಲೆ ಇಂದು ಮನುಕುಲಕ್ಕೆ ದೊಡ್ಡ ಸವಾಲಾಗಿದ್ದು, ಖಾಯಿಲೆಗೆ ತುತ್ತಾದವರುಗಳು ಸರ್ಕಾರಿ ಸ್ವಾಮ್ಯ ಸಂಸ್ಥೆಯಾದ ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆಯನ್ನು ಅವಲಂಬಿಸಿದ್ದು, ರಾಜ್ಯ ವ್ಯಾಪ್ತಿ ಜನರು ಈ ಸಂಸ್ಥೆಗೆ ಚಿಕಿತ್ಸೆಗಾಗಿ ಬರುವುದರಿಂದ ಒತ್ತಡವನ್ನು ನಿವಾರಿಸಲು ಸರ್ಕಾರ ಆಯ್ದ ಕೆಲ ಜಿಲ್ಲಾ ಮಟ್ಟದಲ್ಲಿ ಈ ಖಾಯಿಲೆಗೆ ಚಿಕಿತ್ಸೆ ನೀಡಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲು ನಿರ್ಣಯಿಸಿ ಅದರಲ್ಲಿ ತುಮಕೂರು ಹಾಗೂ ಮೈಸೂರಿನಲ್ಲಿ ಕ್ಯಾನ್ಸರ್ ಖಾಯಿಲೆಗೆ ಪೂರ್ಣ ಪ್ರಮಾಣದಲ್ಲಿ ಚಿಕಿತ್ಸೆ ನೀಡಲು ಬೇಕಾದಂತಹ ಎಲ್ಲಾ ಸೌಕರ್ಯಗಳನ್ನು ಜಿಲ್ಲಾ ಸರ್ಕಾರಿ ಆಸ್ಪತ್ರೆಯ ಆವರಣದಲ್ಲಿ ಸೂಕ್ತ ಕಟ್ಟಡಗಳೊಂದಿಗೆ ಸಜ್ಜುಗೊಳಿಸಿದ್ದರೂ ಸಹ ಇಲ್ಲಿಯವರೆವಿಗೂ ಈ ಶಾಖೆಗಳನ್ನು ಪ್ರಾರಂಭಿಸಲು ಯಾವ ಕಾರಣಕ್ಕಾಗಿ ವಿಳಂಬ ಮಾಡಲಾಗುತ್ತಿದೆ ;

(ಆ) ಈ ರೀತಿ ವಿಳಂಬವಾದಲ್ಲಿ, ಸರ್ಕಾರದ ಉದ್ದೇಶ ವ್ಯರ್ಥವಾಗುವುದಿಲ್ಲವೇ ; ಹಾಗಾಗಿ, ಬಡ–ಮಧ್ಯಮ ವರ್ಗದ ಕ್ಯಾನ್ಸರ್ ಪೀಡಿತ ರೋಗಿಗಳ ಹಿತದೃಷ್ಟಿಯಿಂದ ತುಮಕೂರು ಹಾಗೂ ಮೈಸೂರಿನಲ್ಲಿ ಅರ್ಬುದ ಖಾಯಿಲೆಗೆ ಚಿಕಿತ್ಸೆ ನೀಡಲು ತುರ್ತಾಗಿ ಸರ್ಕಾರ ಕ್ರಮ ವಹಿಸುತ್ತದೆಯೇ ?

## ಮಹಿಳಾ ಶಿಕ್ಷಕರಿಗೆ ಶಿಶುಪಾಲನಾ ರಜೆ ಮಂಜೂರಾತಿ ಬಗ್ಗೆ

**ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೩೭ (೧೪೧೮) ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಶಿಕ್ಷಣ ಇಲಾಖೆಯ ಮಹಿಳಾ ಶಿಕ್ಷಕರಿಗೆ ಶಿಶುಪಾಲನೆ ರಜೆ ಮಂಜೂರು ಮಾಡಲು ಇರುವ ಮಾನದಂಡವೇನು ;

(ಆ) ಶಿಕ್ಷಣ ಇಲಾಖೆಯ ಮಹಿಳಾ ಶಿಕ್ಷಕರಿಗೆ ಶಿಶುಪಾಲನೆ ರಜೆ ಪಡೆಯಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಶಿಕ್ಷಣ ಇಲಾಖೆಯ ಮಹಿಳಾ ಶಿಕ್ಷಕರರಿಗೆ ಶಿಶುಪಾಲನೆ ರಜೆ ಪಡೆಯಲು ಅರ್ಜಿ ಸಲ್ಲಿಸಿದ ನಂತರ ಕ್ಷೇತ್ರ ಶಿಕ್ಷಣಾಧಿಕಾರಿಗಳು ಯಾವ ಕಾಲಮಿತಿಯೊಳಗೆ ಮಂಜೂರು ಮಾಡಲು ಅವಕಾಶ ಇರುತ್ತದೆ ?

## ಕರ್ನಾಟಕ ರಾಜ್ಯದಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೩೮ (೧೪೪೨) ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಹೊಸದಾಗಿ ಎಷ್ಟು ಸರ್ಕಾರಿ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಲಾಗಿದೆ ; ಹೊಸ ಸರ್ಕಾರಿ ಶಾಲೆಗಳನ್ನು ಪ್ರಾರಂಭಿಸಲು, ವಿಲೀನಗೊಳಿಸಲು, ಮುಚ್ಚಲು ಹಾಗೂ ಇರುವ ಶಾಲೆಗಳನ್ನು ಮುಂದುವರೆಸಲು ಸರ್ಕಾರ ಅನುಸರಿಸುತ್ತಿರುವ ಮಾನದಂಡಗಳು ಯಾವುವು ; ವಿದ್ಯಾರ್ಥಿಗಳ ಕನಿಷ್ಠ ಸಂಖ್ಯೆ, ದೂರದ ಮಾನದಂಡ, ಜನಸಂಖ್ಯೆ, ಭೌಗೋಳಿಕ ಪರಿಸ್ಥಿತಿ ಇತ್ಯಾದಿ ಹಾಗೂ ಇನ್ನಿತರ ಮಾನದಂಡಗಳ ಪೈಕಿ ಯಾವುವುಗಳನ್ನು ಆದ್ಯತೆಗೆ ಪರಿಗಣಿಸಲಾಗುವುದು ;

(ಆ) ಉಡುಪಿ ಜಿಲ್ಲೆಯ ಬ್ರಹ್ಮಾವರ ತಾಲ್ಲೂಕಿನ ನೀಲಾವರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ೫ ಕಿ.ಮೀ. ವ್ಯಾಪ್ತಿಯಲ್ಲಿ ಯಾವುದೇ ಸರ್ಕಾರಿ ಶಾಲೆಯಿಲ್ಲದೆ ಸುಮಾರು ೬೩ ಮಕ್ಕಳು ಶಿಕ್ಷಣದಿಂದ ವಂಚಿತರಾಗುವ ಸಾಧ್ಯತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಕುರಿತು ಸ್ಥಳೀಯ ಜನಪ್ರತಿನಿಧಿಗಳು ಶಿಕ್ಷಣ ಇಲಾಖೆಗೆ ಹಲವು ಮನವಿ ಸಲ್ಲಿಸಿದ್ದರೂ, ಇದುವರೆಗೆ ಯಾವುದೇ ಕ್ರಮ ಕೈಗೊಳ್ಳದಿರುವುದಕ್ಕೆ ಕಾರಣವೇನು ;

(ಇ) ಮಕ್ಕಳ ಶಿಕ್ಷಣದ ಹಕ್ಕಿನ ಹಿತದೃಷ್ಟಿಯಿಂದ ನೀಲಾವರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಯನ್ನು ಯಾವಾಗ ಪ್ರಾರಂಭಿಸಲಾಗುವುದು ;

(ಈ) ರಾಜ್ಯದ ಖಾಸಗಿ ಶಾಲೆಗಳು ಸೇರಿದಂತೆ ಎಲ್ಲಾ ಶಾಲೆಗಳಲ್ಲಿರುವ ಅಗತ್ಯ ಮೂಲಭೂತ ಸೌಕರ್ಯಗಳ ಡಿಜಿಟಲೈಸ್ಡ್ ರೀತಿಯ ಮಾಹಿತಿ ಲಭ್ಯವಿದೆಯೇ ; ಅದನ್ನು ಎಷ್ಟು ಅವಧಿಗೊಮ್ಮೆ ಕಾಲೋಚಿತಗೊಳಿಸಲಾಗುತ್ತಿದೆ ;

(ಉ) ಈಗಾಗಲೇ ಇರುವ ಸರ್ಕಾರಿ ಶಾಲೆಗಳಲ್ಲಿ ಕೊರತೆಯಿರುವ ಸೌಕರ್ಯಗಳು ಯಾವುವು ; ಸಮರ್ಪಕ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸರ್ಕಾರ ಯಾವ ರೀತಿಯ ಕಾರ್ಯಯೋಜನೆಗಳನ್ನು ರೂಪಿಸಲಾಗಿದೆ ?

## ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ ಆಸ್ಪತ್ರೆಯಲ್ಲಿರುವ ಉಪಕರಣಗಳ ಬಗ್ಗೆ

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೧೩೯ (೧೪೦೪) ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿ ಜಿಲ್ಲೆಯಲ್ಲಿ ರಾಜ್ಯ ಸರ್ಕಾರದ ಅಧೀನದಲ್ಲಿ ಬರುವ ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ ಆಸ್ಪತ್ರೆಯಲ್ಲಿ ಪ್ರತಿನಿತ್ಯ ಎಷ್ಟು ಹೊರರೋಗಿಗಳು ದಾಖಲಾಗುತ್ತಿದ್ದಾರೆ ; ಕಳೆದ ಎರಡು ವರ್ಷಗಳಲ್ಲಿ ಬಿಮ್ಸ್ ವತಿಯಿಂದ ಬೆಂಗಳೂರಿಗೆ ರೆಫರ್ ಮಾಡಿರುವ ಗಂಭೀರ ಪ್ರಕರಣಗಳ ಸಂಖ್ಯೆ ಎಷ್ಟು ;

(ಆ) ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ ಆಸ್ಪತ್ರೆಯಲ್ಲಿ ಎಷ್ಟು MRI, CT, Dialysis ಇತ್ಯಾದಿ ಉಪಕರಣಗಳು ಕಾರ್ಯನಿರ್ವಹಿಸುತ್ತಿವೆ ; ಕಳೆದ ಮೂರು ವರ್ಷಗಳಲ್ಲಿ AMC ಇಲ್ಲದೇ ನಿಷ್ಕ್ರಿಯವಾಗಿರುವ ಉಪಕರಣಗಳ ಮೌಲ್ಯ ಎಷ್ಟು ; ಕಳೆದ ಐದು ವರ್ಷಗಳಲ್ಲಿ ಖರೀದಿಸಲಾದ ಉಪಕರಣಗಳಿಗೆ ಆಡಿಟ್ ವರದಿ ಇದೆಯೇ ;

(ಇ) ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಮಾನವ ಸಂಪನ್ಮೂಲ, ಉಪಕರಣ, ಸುರಕ್ಷತೆ, ಪಾರದರ್ಶಕತೆ ಕೊರತೆ ಇದ್ದರೆ ಇದಕ್ಕೆ ಜವಾಬ್ದಾರರು ಯಾರು ?

## ಹಿಮ್ಸ್‌ನ ನಿರ್ದೇಶಕರ ಹುದ್ದೆಯನ್ನು ಖಾಯಂಗೊಳಿಸುವುದರ ಕುರಿತು

**ಶ್ರೀ ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೪೦ (೧೩೪೩) ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ :–

ಹಿಮ್ಸ್‌ನ Bye Law ಪ್ರಕಾರ ನಿರ್ದೇಶಕ ಹುದ್ದೆಗೆ ಖಾಯಂ ನಿರ್ದೇಶಕರನ್ನು ೬ ತಿಂಗಳ ಒಳಗಾಗಿ ನೇಮಕಾತಿ ಮಾಡಬೇಕಾಗಿರುತ್ತದೆ. ಆದರೆ ಪ್ರಸ್ತುತ ಇರುವ ನಿರ್ದೇಶಕರು ೨ ವರ್ಷದಿಂದ ಪ್ರಭಾರ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದು, ಯಾವಾಗ ಖಾಯಂ ನಿರ್ದೇಶಕರನ್ನಾಗಿ ನೇಮಕ ಮಾಡಲಾಗುವುದು ; ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ನೇಮಕಾತಿ ಪ್ರಕ್ರಿಯೆಯನ್ನು ಈಗಾಗಲೇ ಮಾಡಬೇಕೆಂದು ಸಾರ್ವಜನಿಕರಿಂದ ಒತ್ತಾಯವಾಗಿದೆಯೇ ? (ಮಾಹಿತಿ ನೀಡುವುದು)

## ಶಾಲೆಗಳಲ್ಲಿ ದೈಹಿಕ ಶಿಕ್ಷಣದ ಸಮಯದಲ್ಲಿ ಮೌಲ್ಯ ಶಿಕ್ಷಣ ಬೋಧಿಸುತ್ತಿರುವ ಬಗ್ಗೆ

**ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ) –**

೧೪೧ (೧೪೪೭) ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಕ್ಕಳಿಗೆ ಶಾಲೆಯಲ್ಲಿ ದೈಹಿಕ ಶಿಕ್ಷಣವನ್ನು ಯಾವಾಗ ಪ್ರಾರಂಭಿಸಲಾಯಿತು ; ಇದರ ಮುಖ್ಯ ಉದ್ದೇಶವೇನು ;

(ಆ) ರಾಜ್ಯದಲ್ಲಿ ಮಂಜೂರಾಗಿರುವ ದೈಹಿಕ ಶಿಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು ; ಕಾರ್ಯನಿರ್ವಹಿಸುತ್ತಿರುವ ದೈಹಿಕ ಶಿಕ್ಷಕರ ಸಂಖ್ಯೆ ಎಷ್ಟು ; ಖಾಲಿಯಿರುವ ದೈಹಿಕ ಶಿಕ್ಷಕರ ಸಂಖ್ಯೆ ಎಷ್ಟು ;

(ಇ) ಖಾಲಿಯಿರುವ ದೈಹಿಕ ಶಿಕ್ಷಕರ ಹುದ್ದೆ ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು ;

(ಈ) ರಾಜ್ಯದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ವಾರದಲ್ಲಿ ಎಷ್ಟು ಪಿರಿಯೆಡ್ ದೈಹಿಕ ಶಿಕ್ಷಣವನ್ನು ಬೋಧಿಸಲಾಗುತ್ತಿತ್ತು ; ಪ್ರಸ್ತುತ ಎಷ್ಟು ಪಿರಿಯೆಡ್ ಬೋಧಿಸಲಾಗುತ್ತಿದೆ ;

(ಉ) ದೈಹಿಕ ಶಿಕ್ಷಣದ ಪಿರಿಯಡ್‌ನಲ್ಲಿ ಮೌಲ್ಯ ಶಿಕ್ಷಣ ಬೋಧಿಸಲಾಗುತ್ತಿದೆಯೇ ಅಥವಾ ಬೋಧಿಸಲು ಉದ್ದೇಶಿಸಲಾಗಿದೆಯೇ ;

(ಊ) ದೈಹಿಕ ಶಿಕ್ಷಣ ಬೋಧಿಸದೇ ಇದ್ದಲ್ಲಿ, ಮಕ್ಕಳ ಸರ್ವಾಂಗೀಣ ವಿಕಾಸಕ್ಕೆ ಮತ್ತು ಭವಿಷ್ಯದ ಕ್ರೀಡಾಪಟುಗಳ ಸೃಷ್ಟಿಯನ್ನು ಮೊಟಕುಗೊಳಿಸಿದಂತೆ ಆಗುವುದಿಲ್ಲವೇ ?

## UUCMS ಯೋಜನೆಯ ಕುರಿತು

**ಶ್ರೀ ರಮೇಶ್ ಬಾಬು (ನಾಮನಿರ್ದೇಶನ ಹೊಂದಿದವರು) –**

೧೪೨ (೧೪೩೩) ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉನ್ನತ ಶಿಕ್ಷಣ ಇಲಾಖೆಯು ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆಯ ಯೋಜನೆಯನ್ನು (UUCMS) ರಾಜ್ಯದಲ್ಲಿ ಜಾರಿಗೆ ತಂದಿರುತ್ತದೆಯೇ ; ತಂದಿದ್ದಲ್ಲಿ, ಎಂದಿನಿಂದ ಯೋಜನೆ ಜಾರಿಗೆ ತರಲಾಗಿರುತ್ತದೆ ; ಈ ಸಂಬಂಧ ಕೈಗೊಂಡಿರುವ ಕ್ರಮಗಳೇನು ;

(ಆ) ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆಯು ವಿಶ್ವವಿದ್ಯಾಲಯಗಳ ಶೈಕ್ಷಣಿಕ ಕ್ರಮಗಳನ್ನು ಒಂದೇ ವ್ಯವಸ್ಥೆಯೊಳಗೆ ನಿರ್ವಹಿಸಲು ಅವಕಾಶ ನೀಡುತ್ತದೆಯೇ ; ಇದರಿಂದ ರಾಜ್ಯದಲ್ಲಿ ಉನ್ನತ ಶಿಕ್ಷಣದ ದಾಖಲಾತಿ, ಕಲಿಕೆ, ಪರೀಕ್ಷೆ, ಮೌಲ್ಯಮಾಪನ, ಸಂಶೋಧನೆ ಹಾಗೂ ಇತರ ಪಠ್ಯಕ್ರಮಗಳಿಗೆ ಸಂಬಂಧಪಟ್ಟಂತೆ ಏಕವ್ಯವಸ್ಥೆಗೆ ಅವಕಾಶ ಇರುತ್ತದೆಯೇ ; (ಇದ್ದಲ್ಲಿ, ವಿವರಗಳನ್ನು ಒದಗಿಸುವುದು)

(ಇ) UUCMS ಯೋಜನೆಯಡಿಯಲ್ಲಿ ಎಷ್ಟು ಸಭೆಗಳನ್ನು ನಡೆಸಲಾಗಿರುತ್ತದೆ, ಕೈಗೊಂಡಿರುವ ಕ್ರಮಗಳು ಮತ್ತು ಇದರ ಪ್ರಯೋಜನಗಳು ಎಷ್ಟು ; (ವಿವರವನ್ನು ಒದಗಿಸುವುದು)

(ಈ) ಈ ಯೋಜನೆ ಅಡಿಯಲ್ಲಿ ಉನ್ನತ ಶಿಕ್ಷಣ ಇಲಾಖೆಯ ಎಷ್ಟು ವಿಶ್ವವಿದ್ಯಾಲಯಗಳು, ಕಾಲೇಜುಗಳು ಮತ್ತು ವಿದ್ಯಾರ್ಥಿಗಳು ಒಳಪಡುತ್ತಾರೆ ; ಖಾಸಗಿ ವಿಶ್ವವಿದ್ಯಾಲಯುಗಳು ಅಥವಾ ಡೀಮ್ಡ್ ವಿಶ್ವವಿದ್ಯಾಲಯಗಳು ಈ ಯೋಜನೆಗೆ ಒಳಪಟ್ಟಿರುತ್ತವೆಯೇ ; (ವಿವರಗಳನ್ನು ನೀಡುವುದು)

(ಉ) ಈ ಯೋಜನೆಯ ಮೂಲಕ ವಿಶ್ವವಿದ್ಯಾಲಯಗಳಲ್ಲಿ ಏಕವ್ಯವಸ್ಥೆಯ ಜಾರಿಗೆ ಸರ್ಕಾರ ಇಲ್ಲಿಯವರೆಗೆ ಕೈಗೊಂಡಿರುವ ಕ್ರಮಗಳೇನು ಮತ್ತು ಜಾರಿಗೊಂಡಿರುವ ಯೋಜನೆಗಳು ಎಷ್ಟು ? (ಪೂರ್ಣ ವಿವರಗಳನ್ನು ಒದಗಿಸುವುದು)

## ಸರ್ಕಾರಿ ನೌಕರರಿಗೆ ನಿಗದಿಪಡಿಸಿರುವ ಕಾರ್ಯಭಾರ ಮತ್ತು ಕರ್ತವ್ಯದ ಅವಧಿಯ ಬಗ್ಗೆ

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ) –**

೧೪೩ (೧೩೯) ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೆಸಿಎಸ್‌ಆರ್ (KCSR) ನಿಯಮ ಅಥವಾ ಸರ್ಕಾರದ ಇತರೆ ಯಾವುದೇ ನಿಯಮಗಳಲ್ಲಿ ಸರ್ಕಾರಿ ನೌಕರರಿಗೆ ನಿಗದಿಪಡಿಸಿದ ಕಾರ್ಯಭಾರ ಮತ್ತು ಕರ್ತವ್ಯದ ಅವಧಿ ಎಷ್ಟು ; ಸರ್ಕಾರಿ/ಅನುದಾನಿತ/ಅನುದಾನರಹಿತ ಪದವಿ ಪೂರ್ವ ಕಾಲೇಜುಗಳಲ್ಲಿ ಉಪನ್ಯಾಸಕರ ನೇಮಕಾತಿ ಸಂದರ್ಭದಲ್ಲಿ ಒಂದು ವಿಷಯಕ್ಕೆ ಒಂದು ಉಪನ್ಯಾಸಕ ಅಥವಾ ಕನಿಷ್ಠ ಕಾರ್ಯಭಾರ ಅಥವಾ ಇತರೆ ಯಾವ ಮಾನದಂಡದಲ್ಲಿ ನೇಮಕಾತಿ ಮಾಡಲಾಗುತ್ತದೆ ;

(ಆ) ಸರ್ಕಾರಿ/ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಯಾವುದೇ ವಿಷಯದ ಉಪನ್ಯಾಸಕರ ಹುದ್ದೆಗೆ ಇಲಾಖೆ ನಿಗದಿಪಡಿಸಿದ ಕನಿಷ್ಠ ಕಾರ್ಯಭಾರವಿಲ್ಲದಿದ್ದಲ್ಲಿ, ಆ ಹುದ್ದೆಯನ್ನು ಖಾಲಿ ಹುದ್ದೆಯೆಂದು ಪರಿಗಣಿಸಲಾಗುತ್ತದೆಯೇ ಅಥವಾ ಹುದ್ದೆಯನ್ನು ರದ್ದು ಪಡಿಸಲಾಗುತ್ತದೆಯೇ ; ಸರ್ಕಾರಿ/ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿಯಿರುವ ಹುದ್ದೆಗಳಿಗೆ ನೇಮಕಾತಿ/ವೇತನಾನುದಾನಕ್ಕೆ ಒಳಪಡಿಸುವಾಗ ಕನಿಷ್ಠ ಕಾರ್ಯಭಾರದ ಷರತ್ತಿನೊಂದಿಗೆ ನೇಮಕಾತಿ/ವೇತನಾನುದಾನಕ್ಕೆ ಒಳಪಡಿಸಲಾಗಿದೆಯೇ ;

(ಇ) ಇಲಾಖಾ ನಿಯಮಾನುಸಾರ ಸರ್ಕಾರಿ/ಅನುದಾನಿತ/ಅನುದಾನರಹಿತ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಕನಿಷ್ಠ ಹಾಗೂ ಗರಿಷ್ಠ ಕಾರ್ಯಭಾರವೆಷ್ಟು ; ಸರ್ಕಾರಿ/ಅನುದಾನಿತ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರಿಗೆ ಕನಿಷ್ಠ ಕಾರ್ಯಭಾರವನ್ನು ಸರಿದೂಗಿಸಲು ವಾರದಲ್ಲಿ ಮತ್ತೊಂದು ಪದವಿ ಪೂರ್ವ ಕಾಲೇಜಿಗೆ ನಿಯೋಜನೆ ಮಾಡಿದ್ದಲ್ಲಿ, ವಿದ್ಯಾರ್ಥಿಗಳು ಗುಣಮಟ್ಟದ ಶಿಕ್ಷಣದ ಜೊತೆಗೆ ಉತ್ತಮ ಫಲಿತಾಂಶ ಪಡೆಯಲು ಸಾಧ್ಯವೇ ;

(ಈ) ಈಗಾಗಲೇ ಮಾನ್ಯ ಶಿಕ್ಷಣ ಸಚಿವರು ಸದನದಲ್ಲಿ ಭರವಸೆ ನೀಡಿದಂತೆ ಸರ್ಕಾರಿ ಆದೇಶ ಇಪಿ ೦೯ ಟಿಪಿಎಯು ೨೦೨೪ ದಿನಾಂಕ : ೧೨.೦೯.೨೦೨೪ಅನ್ನು ಪೂರ್ವಾನ್ವಯಗೊಳಿಸಿ ಶೂನ್ಯ ಕಾರ್ಯಭಾರ ಹೊಂದಿರುವವರನ್ನು ಸೇವೆಯಿಂದ ವಿಮುಕ್ತಿಗೊಳಿಸಿರುವ ಉಪನ್ಯಾಸಕರಿಗೆ ಶಾಶ್ವತ ಪರ್ಯಾಯ ವ್ಯವಸ್ಥೆ ಮಾಡಿ ಸೇವೆಗೆ ಸೇರಿಸಿಕೊಂಡು ಸೇವಾ ಭದ್ರತೆಯನ್ನು ನೀಡಲಾಗಿದೆಯೇ ;

(ಉ) ಈ ಆದೇಶದಂತೆ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಶೂನ್ಯ ಕಾರ್ಯಭಾರ ಅಥವಾ ಕನಿಷ್ಠ ಕಾರ್ಯಭಾರವನ್ನು ಸರಿದೂಗಿಸಲು ಯಾವುದೇ ಅನುದಾನಿತ ಹುದ್ದೆಗಳಿಲ್ಲದಿದ್ದಾಗ, ಸೇವೆಯಿಂದ ವಿಮುಕ್ತಿಗೊಳಿಸದೆ ಸೇವಾ ಭದ್ರತೆಯನ್ನು ನೀಡುವ ನಿಟ್ಟಿನಲ್ಲಿ ಶಾಶ್ವತ

ಪರ್ಯಾಯ ವ್ಯವಸ್ಥೆಯನ್ನು ಮಾಡಲು ಈ ಆದೇಶವನ್ನು ತಿದ್ದುಪಡಿ ಮಾಡಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆಯೇ ? (ಸಂಪೂರ್ಣವಾದ ಮಾಹಿತಿ ನೀಡುವುದು)

## ರಾಜ್ಯದಲ್ಲಿರುವ ೧೦೮ ಆಂಬ್ಯುಲೆನ್ಸ್‌ಗಳ ಸಂಖ್ಯೆ ಕುರಿತು

**ಶ್ರೀ ಟಿ.ಎನ್. ಜವರಾಯಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) –**

೧೪೪ (೧೩೦೪) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ೧೦೮ ಆಂಬ್ಯುಲೆನ್ಸ್‌ಗಳ ಸಂಖ್ಯೆ ಎಷ್ಟು ; ಈ ಆಂಬ್ಯುಲೆನ್ಸ್‌ಗಳ ಸೇವೆಯನ್ನು ಜಿಲ್ಲಾವಾರು ಹಂಚಿಕೆ ಮಾಡಲಾಗಿದೆಯೇ ; (ಹಾಗಿದ್ದಲ್ಲಿ, ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಗ್ರಾಮೀಣ ಪ್ರದೇಶದಲ್ಲಿ ಆಂಬ್ಯುಲೆನ್ಸ್‌ಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ; (ವಿವರ ನೀಡುವುದು)

(ಇ) ರಾಜ್ಯ ಗ್ರಾಮೀಣ ಭಾಗದಲ್ಲಿ ತುರ್ತು ಸಂದರ್ಭದಲ್ಲಿ ಆಂಬ್ಯುಲೆನ್ಸ್ ಸಿಗದೆ ಗ್ರಾಮೀಣ ಪ್ರದೇಶದ ಸಾವಿರಾರು ಜನ, ಪ್ರತಿ ವರ್ಷ ಪ್ರಾಣ ಕಳೆದುಕೊಳ್ಳುತ್ತಿದ್ದು, ಮೂರು ಅಥವಾ ನಾಲ್ಕು ಗ್ರಾಮ ಪಂಚಾಯತಿಗಳಿಗೊಂದು ಆಂಬ್ಯುಲೆನ್ಸ್‌ಗಳ ಸೇವೆಯನ್ನು ಒದಗಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ ? (ಈ ಬಗ್ಗೆ ಮಾಹಿತಿ ನೀಡುವುದು)

## ರಾಜ್ಯದ ಖಾಸಗಿ ಅನುದಾನಿತ ಸಂಯುಕ್ತ ಪದವಿ ಕಾಲೇಜುಗಳ ಕುರಿತು

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ) –**

೧೪೫ (೧೪೨೨) ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಖಾಸಗಿ ಅನುದಾನಿತ ಸಂಯುಕ್ತ ಪದವಿ ಕಾಲೇಜುಗಳಿಂದ ಬೇರ್ಪಟ್ಟ ಪದವಿಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು ; ವಿಭಾಗವಾರು ಮಾಹಿತಿ ನೀಡುವುದು ;

(ಆ) ರಾಜ್ಯದಲ್ಲಿ ಸಂಯುಕ್ತ ಪದವಿ ಕಾಲೇಜುಗಳಿಂದ ಬೇರ್ಪಟ್ಟ ಪ್ರತಿಯೊಂದು ಪದವಿ ಪೂರ್ವ ಕಾಲೇಜುಗಳಲ್ಲಿ ಮಂಜೂರಾದ ವಿಷಯವಾರು ಹುದ್ದೆಗಳೆಷ್ಟು ; ಅದರಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹಾಗೂ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ; ವಿವರವಾದ ಮಾಹಿತಿ ಒದಗಿಸುವುದು ;

(ಇ) ಸಂಯುಕ್ತ ಪದವಿ ಮಹಾವಿದ್ಯಾಲಯಗಳಿಂದ ಬೇರ್ಪಟ್ಟಿರುವ ಪದವಿಪೂರ್ವ ಕಾಲೇಜುಗಳಲ್ಲಿ ವಿಷಯವಾರು ಹೊಸದಾಗಿ ಸೃಷ್ಟಿಸಬೇಕಾದ ಹುದ್ದೆಗಳ ಸಂಖ್ಯೆ ಎಷ್ಟು ; ಪ್ರತಿ ಕಾಲೇಜುವಾರು ಮಾಹಿತಿ ನೀಡುವುದು ; ಹೀಗೆ ಸೃಷ್ಟಿಸುವ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲು ಸರ್ಕಾರ ಅನುಮತಿ ನೀಡಲು ಚಿಂತನೆ ನಡೆಸಿದೆಯೇ ?

## ಬಿ.ಇಡಿ ಕಾಲೇಜುಗಳ ಪ್ರವೇಶಾತಿ ಶುಲ್ಕ ಪರಿಷ್ಕರಿಸುವ ಕುರಿತು

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) –**

೧೪೬ (೧೩೬೭) ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಬಿ.ಇಡಿ ಕಾಲೇಜುಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಸದರಿ ಕಾಲೇಜುಗಳಲ್ಲಿ ಪ್ರಸ್ತುತ ಪ್ರವೇಶಾತಿ ಶುಲ್ಕ ಎಷ್ಟಿದೆ ; ಎಷ್ಟು ವರ್ಷಗಳಿಂದ ಇದೇ ಪ್ರವೇಶಾತಿ ಶುಲ್ಕವನ್ನೇ ಅನುಸರಿಸಿಕೊಂಡು ಬರಲಾಗುತ್ತಿದೆ ; ಅದಕ್ಕೆ ಕಾರಣಗಳೇನು ; (ಸಂಪೂರ್ಣ ವಿವರ ನೀಡುವುದು)

(ಇ) ಬಿ.ಇಡಿ ಕಾಲೇಜುಗಳ ಪ್ರವೇಶಾತಿ ಶುಲ್ಕವನ್ನು ಬಹಳಷ್ಟು ವರ್ಷಗಳಿಂದ ಪರಿಷ್ಕರಿಸದೇ ಇದ್ದು, ಪ್ರವೇಶ ಶುಲ್ಕವನ್ನು ಪರಿಷ್ಕರಿಸಬೇಕೆಂಬ ಖಾಸಗಿ ಕಾಲೇಜುಗಳ ಕೋರಿಕೆಗೆ ಸರ್ಕಾರದ ಕ್ರಮವೇನು ;

(ಈ) ಪ್ರವೇಶಾತಿ ಶುಲ್ಕ ಪರಿಷ್ಕರಣೆ ಸಂಬಂಧ ಸರ್ಕಾರ ರಚಿಸಿರುವ ರಾಜ್ಯ ಮಟ್ಟದ ಸಮಿತಿಯಲ್ಲಿ ಎಷ್ಟು ಮಂದಿ ಸದಸ್ಯರಿದ್ದಾರೆ ; (ಆದೇಶ ಪ್ರತಿಯೊಂದಿಗೆ ಸಂಪೂರ್ಣ ವಿವರ ನೀಡುವುದು)

(ಉ) ಸದರಿ ಸಮಿತಿಗೆ ಎಷ್ಟು ಅವಧಿಯೊಳಗೆ ವರದಿ ಸಲ್ಲಿಸಲು ಕಾಲಮಿತಿ ನಿಗದಿಗೊಳಿಸಲಾಗಿತ್ತು ; ಈ ಸಮಿತಿಯು ಸರ್ಕಾರಕ್ಕೆ ವರದಿ ಸಲ್ಲಿಸಿದೆಯೇ ; ಸಲ್ಲಿಸಿದ್ದಲ್ಲಿ, ಶಿಫಾರಸ್ಸಿನ ಪ್ರಮುಖಾಂಶಗಳೇನು ; (ಸಂಪೂರ್ಣ ವಿವರ ನೀಡುವುದು)

(ಉ) ಸಮಿತಿಯ ಶಿಫಾರಸ್ಸುಗಳನ್ನು ಯಾವ ಶೈಕ್ಷಣಿಕ ವರ್ಷದಿಂದ ಜಾರಿಗೆ ತರಲು ಸರ್ಕಾರ ಉದ್ದೇಶಿಸಿದೆ ? (ವಿವರ ನೀಡುವುದು)

## ದೇಶ ಮಟ್ಟದಲ್ಲಿ ನೀಟ್ ಪರೀಕ್ಷೆ ನಡೆಸುವ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) –**

೧೪೭ (೧೩೧೬) ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದೇಶ ಮಟ್ಟದಲ್ಲಿ ನೀಟ್ ಪರೀಕ್ಷೆ ನಡೆಸುವ ಮೂಲಕ ರಾಜ್ಯದ ವಿದ್ಯಾರ್ಥಿಗಳು ವೈದ್ಯಕೀಯ ಸೀಟುಗಳಲ್ಲಿ ಕಡಿಮೆ ಸೀಟುಗಳು ಸಿಗುವ ಮತ್ತು ಗ್ರಾಮಾಂತರ ವಿದ್ಯಾರ್ಥಿಗಳಿಗೆ ನೀಟ್ ಪರೀಕ್ಷೆ ಮೂಲಕ ಸೀಟು ಪಡೆಯಲು ಉಂಟಾಗಿರುವ ತೊಂದರೆಗಳ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ;

(ಆ) ರಾಜ್ಯದಲ್ಲಿ ವೈದ್ಯಕೀಯ ಸೀಟುಗಳ ಹಂಚಿಕೆ ಮಾಡಲು ನೀಟ್ ಪರೀಕ್ಷೆ ಬದಲು ರಾಜ್ಯದಲ್ಲಿಯೇ ಅರ್ಹತೆ ಪರೀಕ್ಷೆ ನಡೆಸಿ, ಈ ಹಿಂದೆ ನೀಟ್ ಪೂರ್ವದಲ್ಲಿ ಸೀಟುಗಳ ಹಂಚಿಕೆ ಮಾಡುತ್ತಿದ್ದ ಕ್ರಮದಲ್ಲಿಯೇ ಸೀಟುಗಳ ಹಂಚಿಕೆ ಜಾರಿಗೆ ತರಲು ಸರ್ಕಾರಕ್ಕೆ ಇರುವ ತೊಂದರೆಗಳೇನು ;

(ಇ) ರಾಷ್ಟ್ರಮಟ್ಟದಲ್ಲಿ ನಡೆಯುವ ನೀಟ್ ಪರೀಕ್ಷೆಯಿಂದ ರಾಜ್ಯದ ವಿದ್ಯಾರ್ಥಿಗಳಿಗೆ ಎಷ್ಟು ಹೆಚ್ಚುವರಿಯಾಗಿ ಸೀಟು ದೊರೆಯಲಿದೆ ; (ಸಂಪೂರ್ಣ ವಿವರ ನೀಡುವುದು)

(ಈ) ನೀಟ್ ಪರೀಕ್ಷೆ ಮೂಲಕ ರಾಜ್ಯದ ವಿದ್ಯಾರ್ಥಿಗಳಿಗೆ ಕಡಿಮೆ ಸೀಟು ದೊರೆಯುತ್ತಿದೆ ಎಂಬ ದೂರು ಬಂದಿರುವುದು ನಿಜವೇ ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು ; ಗ್ರಾಮೀಣ ಭಾಗದಲ್ಲಿ ನೀಟ್ ಪರೀಕ್ಷೆಗೆ ತರಬೇತಿಗಳು ನೀಡದೇ ಇರುವುದರಿಂದ ವಿದ್ಯಾರ್ಥಿಗಳಿಗೆ ಮೆಡಿಕಲ್ ಸೀಟು ಪಡೆಯಲು ಸಾಧ್ಯವಾಗದ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು ; (ವಿವರ ನೀಡುವುದು)

(ಉ) ದೇಶದ ಎಷ್ಟು ರಾಜ್ಯಗಳಲ್ಲಿ ನೀಟ್ ಪರೀಕ್ಷೆಯನ್ನು ವಿರೋಧಿಸಿ ನಿರ್ಣಯಗಳನ್ನು ಕೈಗೊಳ್ಳಲಾಗಿದೆ ; ರಾಜ್ಯ ಸರ್ಕಾರವು ಕೈಗೊಂಡ ನಿರ್ಣಯ ಯಾವ ಹಂತದಲ್ಲಿದೆ ? (ವಿವರ ನೀಡುವುದು)

## ಅರಣ್ಯ ಒತ್ತುವರಿ ಬಗ್ಗೆ

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೪೮ (೧೩೨೧) ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಅರಣ್ಯ ಭೂಮಿಯನ್ನು ಒತ್ತುವರಿ ಮಾಡಲಾದ ಪ್ರಕರಣಗಳು ಎಷ್ಟು ; ಅವುಗಳ ವಿಸ್ತೀರ್ಣ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಅರಣ್ಯ ಭೂಮಿ ಒತ್ತುವರಿಯಾಗಿದ್ದಲ್ಲಿ, ಸದರಿ ಒತ್ತುವರಿಯನ್ನು ತೆರವುಗೊಳಿಸಲು ಸರ್ಕಾರದಿಂದ ಯಾವ ಕ್ರಮಕೈಗೊಳ್ಳಲಾಗಿದೆ ; ಎಷ್ಟು ಜಮೀನು ಮತ್ತೆ ವಶಕ್ಕೆ ಪಡೆಯಲಾಗಿದೆ ; (ಜಿಲ್ಲಾವಾರು ವಿವರ ನೀಡುವುದು)

(ಇ) ಅರಣ್ಯ ಭೂಮಿಯನ್ನು ಯಾವುದಾದರೂ ಸಂಸ್ಥೆಗಳಿಗೆ ಗುತ್ತಿಗೆ ನೀಡಲಾಗಿದೆಯೇ ; ಗುತ್ತಿಗೆ ನೀಡಿದಲ್ಲಿ, ಸದರಿ ಗುತ್ತಿಗೆ ಪಡೆದ ಸಂಸ್ಥೆಗಳು, ಭೂ ವಿಸ್ತೀರ್ಣ ಮತ್ತು ಗುತ್ತಿಗೆ ಆದೇಶದ ವಿವರ ನೀಡುವುದು ;

(ಈ) ಅರಣ್ಯ ಭೂಮಿಯನ್ನು ಗುತ್ತಿಗೆ ನೀಡಲು ಅರಣ್ಯ ಸಂರಕ್ಷಣಾ ಕಾಯ್ದೆಯ ಪ್ರಕಾರ ಅವಕಾಶ ಇದೆಯೇ ; (ವಿವರ ನಿಡುವುದು)

(ಉ) ಅರಣ್ಯ ಮತ್ತು ಕಂದಾಯ ಜಮೀನಿನ ಗಡಿ ಗುರುತಿಸದ ಕಾರಣ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಅಕ್ರಮ ಸಕ್ರಮದಡಿ (ನಮೂನೆ ೫೦, ೫೩ & ೫೭) ರಲ್ಲಿ ಜಮೀನು ಮಂಜೂರಾತಿ ಕೋರಿ ಅರ್ಜಿ ಸಲ್ಲಿಸಿದ ಫಲಾನುಭವಿಗಳಿಗೆ ಜಮೀನು ಮಂಜೂರಾತಿಗೊಳಿಸಲು ಅಡ್ಡಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ;

(ಊ) ಕಳೆದ ಐದು ವರ್ಷಗಳಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಅರಣ್ಯ ಮತ್ತು ಕಂದಾಯ ಇಲಾಖೆ ಜಮೀನಿನ ಭೂ–ಗಡಿ ಗುರುತಿಸಲು ಕೋರಿ ಸಾರ್ವಜನಿಕರು ಸಲ್ಲಿಸಿದ ಅರ್ಜಿಗಳು ಎಷ್ಟು ; ಭೂ–ಗಡಿ ಗುರುತಿಸಿದ ಮತ್ತು ಬಾಕಿ ಇರುವ ಭೂ ವಿಸ್ತೀರ್ಣವೆಷ್ಟು ; ತಾಲ್ಲೂಕುವಾರು ಮಾಹಿತಿ ನೀಡುವುದು ;

(ಋ) ಯಾವ ಕಾಲಮಿತಿಯೊಳಗೆ ಸದರಿ ಭೂ–ಗಡಿ ಗುರುತಿಸಲಾಗುವುದು ?

## ಧಾರವಾಡ ಹಾಗೂ ಹುಬ್ಬಳ್ಳಿ–ಸೆಂಟ್ರಲ್ ಕ್ಷೇತ್ರದಲ್ಲಿರುವ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳ ಬಗ್ಗೆ

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) –**

೧೪೯ (೧೩೩೪) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಧಾರವಾಡ ಜಿಲ್ಲೆ ಹಾಗೂ ಹುಬ್ಬಳ್ಳಿ ಸೆಂಟ್ರಲ್ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳ ಸಂಖ್ಯೆ ಎಷ್ಟು ;

(ಆ) ಇದರಲ್ಲಿ ಎಷ್ಟು ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳು ಸುಸ್ಥಿತಿಯಲ್ಲಿವೆ ಹಾಗೂ ಎಷ್ಟು ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳು ದುರಸ್ತಿಯಲ್ಲಿವೆ ; ದುರಸ್ತಿಯಲ್ಲಿರುವ ಟ್ರಾನ್ಸ್‌ಫಾರ್ಮರ್‌ಗಳನ್ನು ಬದಲಾವಣೆ ಮಾಡುವ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಕ್ರಮವೇನು ;

(ಇ) ಹುಬ್ಬಳ್ಳಿ ಸೆಂಟ್ರಲ್ ವಿಧಾನಸಭಾ ಕ್ಷೇತ್ರಕ್ಕೆ ಹೊಸ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳ ಅಳವಡಿಕೆಗೆ ಸರ್ಕಾರ ಕೈಗೊಂಡಿರುವ ಕ್ರಮವೇನು ;

(ಈ) ಹೊಸ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಪಡೆಯಲು ಸರ್ಕಾರ ನಿಗದಿಪಡಿಸಿರುವ ಮೊತ್ತವೆಷ್ಟು ; ಹಾಗೂ ಈ ಹಿಂದಿನ ಸರ್ಕಾರ ನಿಗದಿಪಡಿಸಿದ ಮೊತ್ತವೆಷ್ಟು ? (ವಿವರ ನೀಡುವುದು)

## ರಾಜ್ಯದಲ್ಲಿ ವಿದ್ಯುತ್ ದರ ಏರಿಕೆ ಪ್ರಸ್ತಾವನೆಯ ಕುರಿತು

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೫೦ (೧೩೫೮) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಐದು ವಿದ್ಯುತ್ ಸರಬರಾಜು ಕಂಪನಿಗಳು (ESCOMS) ಏಪ್ರಿಲ್ ೧ ರಿಂದ ಜಾರಿಗೆ ಬರುವಂತೆ ವಿದ್ಯುತ್ ದರ ಏರಿಕೆಗೆ ಪ್ರಸ್ತಾವನೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ಪ್ರಸ್ತಾವನೆಯಲ್ಲಿ ಪ್ರತಿ ಯೂನಿಟ್‌ಗೆ ಸರಾಸರಿ ಎಷ್ಟು ಪೈಸೆ ಹೆಚ್ಚಳ ಮಾಡಲು ಕೋರಲಾಗಿದೆ ; ಹಾಗೂ ಬೆಸ್ಕಾಂ (BESCOM), ಜೆಸ್ಕಾಂ (GESCOM), ಚೆಸ್ಕಾಂ (CHESCOM), ಹೆಸ್ಕಾಂ (HESCOM) ಮತ್ತು ಮೆಸ್ಕಾಂ (MESOM) ಕಂಪನಿಗಳು ಬೇಡಿಕೆ ಇಟ್ಟಿರುವ ಪ್ರತ್ಯೇಕ ದರಗಳು ಎಷ್ಟು ;

(ಇ) ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳು ಒಟ್ಟಾರೆ ೪,೫೦೦ ಕೋಟಿ ರೂಪಾಯಿಗಳ ನಷ್ಟದಲ್ಲಿ ಇರುವುದು ನಿಜವೇ ; ಕೇವಲ ಬೆಸ್ಕಾಂ ಒಂದೇ ೨೦೨೪–೨೫ ನೇ ಸಾಲಿನಲ್ಲಿ ೨,೮೦೦ ಕೋಟಿ ರೂಪಾಯಿಗಳಿಗೂ ಅಧಿಕ ನಷ್ಟ ಅನುಭವಿಸಲು ಕಾರಣಗಳೇನು ;

(ಈ) ಗೃಹ ಬಳಕೆಯ ವಿದ್ಯುತ್ ದರ ಮಾತ್ರವಲ್ಲದೆ ಸ್ಥಿರ ಶುಲ್ಕವನ್ನು (Fixed Charges) ೧೦ ರಿಂದ ೨೦ ರೂಪಾಯಿಗಳವರೆಗೆ ಹೆಚ್ಚಿಸಲು ಉದ್ದೇಶಿಸಲಾಗಿದೆಯೇ ; ಈಗಾಗಲೇ ಬೆಲೆ ಏರಿಕೆಯಿಂದ ತತ್ತರಿಸಿರುವ ಸಾಮಾನ್ಯ ಜನರಿಗೆ ಮತ್ತು ಸಣ್ಣ ಕೈಗಾರಿಕೆಗಳಿಗೆ ಈ ದರ ಏರಿಕೆಯಿಂದ ಆಗುವ ಹೊರೆ ತಪ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

**ಕೆ.ಆರ್. ಮಹಾಲಕ್ಷ್ಮಿ**

ಕಾರ್ಯದರ್ಶಿ

ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, ಬೆಂಗಳೂರು, ಕಾಸೂ – 781 ಪ್ರತಿಗಳು (ಪಿ6)

**List of Questions**
**for Oral Answers**

**Total No. of**
**Questions - 15**

# LIST - 10

# KARNATAKA LEGISLATIVE COUNCIL

## ONE HUNDRED AND FIFTY EIGHTH SESSION

## (Adjourned Meetings)

## Monday, the 16th March, 2026

---

**GROUP - I**

1. Minister for Food and Civil Supplies and Consumer Affairs
2. Minister for Energy
3. Minister for Health and Family Welfare
4. Minister for Forest, Ecology and Environment
5. Minister for Medical Education and Skill Development
6. Minister for School Education and Literacy
7. Minister for Higher Education

---

### COMMENCEMENT OF BRANCHES OF KIDWAI INSTITUTION IN TUMAKURU AND MYSURU

**Dr. Arathi Krishna (Nominated) -**

136(1379) Will the Minister for Medical Education and Skill Development be pleased to State :-

(a) today the cancer has become the major challenge to the mankind, patients who were affected by this disease are relying on the Government-owned institution like Kidwai Memorial Institute of Oncology for treatment,

since people from across the State are coming to this institution for treatment, the Government has decided to reduce the burden by providing cancer treatment at selected district level centres for the convenience of the public, accordingly in Tumakuru and Mysuru, all necessary facilities have been set up within the premises of the district Government hospitals along with suitable buildings to provide comprehensive cancer treatment, however despite these arrangements, the reasons for the delay that is being caused for the commencement of these branches till date ;

(b) if so, whether it will cause failure of the purpose of the Government ; hence, whether the step has been initiated by the Government immediately to provide the treatment for cancer disease in Tumakuru and Mysuru in the interest of poor and middle class cancer affected patients ?

## SANCTIONING OF CHILD CARE LEAVE FOR FEMALE TEACHERS

**Sri. Y.M. Satish (Local Authorities Constituency) -**

137 (1418) Will the Minister for School Education and Literacy be pleased to State :-

(a) the prevailing criteria for sanctioning of the child care leave to female teachers in the Education Department ;

(b) whether it has come to the notice of the Government that the hardship is being faced by the female teachers in the Education Department to get the child care leave ;

(c) the time limit with in which child care leave would be sanctioned by the Block Education Officer after submission of application to get the same by the female teachers in the Education Department ?

## GOVERNMENT PRIMARY SCHOOLS IN THE STATE

**Sri. Manjunatha Bhandari (Local Authorities Constituency) -**

138 (1442) Will the Minister for School Education and Literacy be pleased to State :-

(a) the number of new Government Primary Schools which have been commenced in the State during the last three years ; the particulars of yard sticks that is being complied by the Government for the commencement of the new Government schools, merging closing and to continue the existing schools ; out of the critereas like minimum number of students, criteria of distance, population, Geographical condition etc and other criteria, the particulars of the same that is being considered as a priority ;

(b) whether it has come to the notice of the Government that there is a possibility of approximately 93 children are deprived from the education without any Government school within 5 K.M. radius in the limit of Neelavara gram panchayat in Brahmavar taluk of Udupi district ; the reason for any action has not been taken till date even though several requisition have been submitted to the Education Department by the local representatives in this regard ;

(c) the date on which the Government Primary School would be commenced in the limit of Neelavar Gram panchayat in the interest of the right of children education ;

(d) whether the information is available in the digitalized form of required basic facilities in all schools including private schools of the State; the period within which the same would be updated ;

(e) the particulars of shortage facilities in the already existing schools ; the manner in which the work plans have been chalkedout by the Government to provide the proper besic facilities ?

## EQUIPMENTS IN BELAGAVI INSTITUTE OF MEDICAL SCIENCES (BIMS) HOSPITAL

**Sri. Nagaraju M. (Elected by Legislative Assembly) -**

139 (1404) Will the Minister for Medical Education and Skill Development be pleased to State :-

(a) the number of out patients who are being registered daily in the Belagavi Institute of Medical Sciencies (BIMS) hospital which is coming under the State Government in Belagavi district ; the number serious cases that have been referred to Bengaluru by the Belagavi Institute of Medical Sciences (BIMS) during the last 2 years ;

(b) the number of MRI, CT and Dialysis etc equipments which are functioning in Belagavi Institute of Medical Sciences hospital ; the value of the equipments which are not functioning properly due to lack of AMC (Annual Maintenance Contract) during the last three years ; whether there is an audit report for the equipments that have been purchased during the last 5 years ;

(c) if there is a shortage of human resources, equipment, safety and transparency in Belagavi Institute of Medical Sciences (BIMS), the particular of persons who are responsible for the same ?

## REGULARIZATION OF POST OF THE DIRECTOR OF HASSAN INSTITUTE OF MEDICAL SCIENCES (HIMS)

**Sri. Suraj Revanna (Local Authorities Constituency) -**

140(1343) Will the Minister for Medical Education and Skill Development be pleased to State :-

as per the Bye Law of HIMS (Hassan Institute of Medical Sciences) the permanent director must be appointed to the post of director within 6 months but, the current director is working as in-charge director during the last 2 years, the date on which the permanent director would be appointed ; whether it has come to the notice of the Government; whether the public are demanding that the appointment process has to be done immediately ? (information be furnished)

## TEACHING OF VALUE EDUCATION DURING PHYSICAL EDUCATION PERIOD IN SCHOOLS

**Sri. Chidanand M.Gowda (Graduates' Constituency) -**

141 (1447) Will the Minister for School Education and Literacy be pleased to State :-

(a) the date on which the Physical Education has been commenced for children in schools; the main intention of the same ;

(b) the number of Physical Education teachers posts that have been sanctioned in the State ; the number of Physical Education teachers who are working; the number of vacant post of Physical Education teacher ;

(c) the steps taken by the Government to fill up the Physical Education teachers posts which are lying vacant ;

(d) the number of periods in a week the Physical Education was taught in the Government Primary and Secondary Schools of the State ; the number of periods for which this subject is being taught currently ;

(e) whether the value education is being taught during the Physical Education periods or whether it has been intended to teach the same ;

(f) if Physical Education is not taught, whether it will cause hindrance to the overall development of children and the creation of future sports persons ?

## PROJECT OF THE UNIFIED UNIVERSITY AND COLLEGE MANAGEMENT SYSTEM (UUCMS)

**Sri. Ramesh Babu (Nominated) -**

142 (1433) Will the Minister for Higher Education be pleased to State :-

(a) whether the project for the unified university and college management system (UUCMS) has been implemented by the higher education department in the State ; if so, the date on which the same has been implemented ; the measures taken in this regard ;

(b) whether there is a provision to maintain the academic measures of the universities by the unified universities and college management system under one umbrella ; whether there is a provision for bringing all of them under one umbrella with regard enrollment of higher education, learning, examination, evaluation, research and other related curriculum activities in the State ; (if so, details be furnished)

(c) the number of meetings that have been conducted under the project of unified university and college management system (UUCMS) ; the measures that have been taken and the benefits thereof ; (details be furnished)

(d) the number of universities, colleges and students of higher education department which are coming under this project ; whether the private university or deemed to be universities are coming under this project ; (details be furnished)

(e) the measures taken by the Government to implement the uniform system in the universities through this project so far and the number of projects that have been implemented ? (complete details be furnished)

**WORKLOAD AND ON-DUTY PERIOD FOR GOVERNMENT EMPLOYEES**

**Sri. S.L. Bhojegowda (Teachers' Constituency) -**

143 (1339) Will the Minister for School Education and Literacy be pleased to State :-

(a) the workload and on-duty period that has been prescribed for the Government employees in KCSR Rule or any other rules of the Government ; the criteria in which the recruitment would be carried out like one lecturer for one subject or minimum workload or other criteria while recruiting lecturers in the Government/aided/unaided Pre-university colleges ;

(b) if there is no minimum workload that has been prescribed by the department for the post of lecturer of any subject in the Government/aided Pre-university

colleges, whether that post would be considered as vacant post or whether the post would be cancelled ; whether the vacant posts in the Government/aided Pre-university colleges have been recruited/brought under the grant in aid along with the condition of minimum workload while recruiting/bringing under grant in aid ;

(c) the minimum and maximum workload for the lecturers of the Government/aided/unaided Pre-university colleges as per the rules of the department ; if the lecturers of Government/aided Pre-university colleges are deputed to another Pre-university college in a week to balance the minimum workload, whether it is possible to get the good result by the students along with quality education ;

(d) whether the service security has been provided for the lecturers who have nil workload and relieved from the service and included taking into the service by making permanent alternative arrangement to them retrospectively vide the Government order EP 09, TPU 2024 dated ; 12.09.2024 as per the assurance which has been already given in the House by the Hon'ble Minister for education ;

(e) whether the necessary step has been taken to amend this order by providing permanent alternative arrangement in view of providing service security without removing from the service when there are no Aided posts to cover nil or minimum workload in Aided Pre-university Colleges as per this order ? (complete information be furnished)

## NUMBER OF 108 AMBULANCES IN THE STATE

**Sri. T.N. Javarayi Gowda (Elected by Legislative Assembly) -**

144 (1304) Will the Minister for Health and Family Welfare be pleased to State :-

(a) the number of 108 ambulances in the State; whether the ambulance services has been allocated districtwise ; (if so, districtwise information be furnished)

(b) whether it has come to the notice of the Government that there is a shortage of ambulances in rural areas ; if so, the steps taken by the Government ; (details be furnished)

(c) thousands of people in rural areas are loosing their life every year due to the shortage of ambulances during emergencies in the rural areas of the State, whether the steps would be taken by the Government to provide one ambulance service for every three or four Gram Panchayats ; in this regard information be furnished ?

## PRIVATE AIDED COMPOSITE FIRST GRADE COLLEGES IN THE STATE

**Sri. S.V. Sankanur (Graduates' Constituency) -**

145 (1422) Will the Minister for School Education and Literacy be pleased to State :-

(a) the number of Pre-university colleges that have been bifurcated from Private Aided Composite First Grade Colleges of the State ; divisionwise information be furnished ;

(b) the number of subject wise posts that have been sanctioned to each Pre-university colleges that have been bifurcated from Private Aided Composite First Grade colleges in the State ; out of which, the number of posts which are currently working and lying vacant ; the detailed information be furnished ;

(c) the number of subject wise new posts that has to be created in the Pre-university colleges that have been bifurcated from Composite First Grade Colleges ; each college wise information be furnished ; whether the Government has contemplated for granting the permission to recruit these created posts in this manner ?

**REVISION OF ADMISSION FEE IN B.ED COLLEGES**

**Sri. Madhu G. Madegowda (Graduates' Constituency) -**

146 (1367) Will the Minister for Higher Education be pleased to State :-

(a) the number of Government, aided and unaided B.Ed colleges in the State ; (districtwise information be furnished)

(b) the existing admission fee in the said colleges; the number of years from which the same fee structure is being complied ; the reasons for the same ; (complete details be furnished)

(c) the step taken by the Government with regard to the requisition by the private colleges to revise the admission fee of B.Ed colleges which has not been revised for many years ;

(d) the number of members in the State level committee that has been constituted by the Government with regard to revision of admission fee ; (complete details along with order copy be furnished)

(e) the time limit that has been prescribed to submit the report to the committee ; whether the committee has submitted its report to the Government ; if so, the key facts of the recommendations of the same ; (complete details be furnished)

(f) the particulars of academic year from which the Government has intended to implement the recommendations of the committee ? (complete details be furnished)

## CONDUCTING NEET EXAMINATION AT THE NATIONAL LEVEL

**Sri. Ivan D'Souza (Elected by Legislative Assembly) -**

147 (1316) Will the Minister for Higher Education be pleased to State :-

(a) the measures taken by the Government with regard to the hardship has been caused for the availability of very meagre medical seats for the students of the State and difficulties faced by the rural students to secure seat through NEET examination at the national level ;

(b) the prevailing impediments to the Government for the implementation of the allocation of seats in the manner to allocation of seats earlier than the NEET by conducting eligibility examination in the State instead of NEET examination for allocation of medical seats in the State ;

(c) the number of additional seats that are available for the students of the State from the NEET examination conducted at the national level ; (complete details be furnished)

(d) whether it is true that the complaints have been received with regard to the fewer seats are available for the students of the State through NEET examination ; if so, the measures taken by the Government in this regard ; due to the lack of proper training for NEET examination in rural areas, it is difficult to get the medical seat for the students, the measures taken by the Government in this regard ; (details be furnished)

(e) the number of States of the nation in which the resolution has been passed by opposing NEET examination ; the present stage of the resolution taken by the State Government ? (details be furnished)

## REGARDING ENCROACHMENT OF FOREST

**Sri. Kishor Kumar Puttur (Local Authorities Constituency) -**

148 (1321) Will the Minister for Forest, Ecology and Environment be pleased to State :-

(a) the details of the number of forest land encroachment cases in the State ; the extent thereof ; (districtwise information be furnished)

(b) if the forest land has been encroached, the step taken by the Government for eviction of the said encroachment ; the extent of land that has been taken into the possession again ; (districtwise details be furnished)

(c) whether the forest land has been provided on lease to any agencies ; if so, the details of the leased agencies, the extent of land and the leased order be furnished ;

(d) whether there is a provision to provide the forest land on lease as per the Forest Conservation Act ; (details be furnished)

(e) whether it has not come to the notice of the Government that there is obstacle for granting of the land to beneficiaries who have submitted the application by seeking for granting of the land in Form 50, 53 and 57 under the Akrama-Sakrama Scheme in Dakshina Kannada and Udupi districts as the boundaries are not identified between the forest and revenue land ;

(f) the number of applications that have been submitted by the public for seeking the identification of lands boundaries of Forest and Revenue Departments in Dakshina Kannada and Udupi Districts during the last 5 years; the extent of land boundaries that has been identified and the extent of land is pending ; talukwise details be furnished ;

(g) the time limit within which the said land boundary would be identified ?

## ELECTRICAL TRANSFORMERS IN DHARWAD AND HUBBALLI-CENTRAL ASSEMBLY CONSTITUENCY

**Sri. Pradeep Shettar (Local Authorities Constituency) -**

149 (1334) Will the Minister for Energy be pleased to State :-

(a) the number of electrical transformers in the limit of Dharwad district and Hubballi Central Assembly Constituency ;

(b) out of which, the number of transformers that are in good condition and under repair ; the step to be taken by the Government with regard to replacing the transformers which are in repair condition ;

(c) the steps taken by the Government for the installation of new electrical transformers in the limit of Hubballi Central Assembly Constituency ;

(d) the amount that has been fixed by the Government to get the new electrical transformer ; and the amount that has been fixed by the previous Government ? (details be furnished)

## PROPOSAL TO HIKE OF ELECTRICITY TARIFF IN THE STATE

**Sri. C.N. Manje Gowda (Local Authorities Constituency) -**

150 (1358) Will the Minister for Energy be pleased to State :-

(a) whether it has come to the notice of the Government that five Electricity Supply Companies (ESCOMs) in the State have submitted a proposal for hike of electricity tariff with effect from 1st April ;

(b) the average paise per unit that has been sought to hike in this proposal; and the details of the separate rates which are demanded by the BESCOM, GESCOM, CHESCOM, HESCOM and MESCOM ;

(c) whether it is true that the electricity supply companies of the State are in total loss of Rs.4500 crores ; the reasons for more than Rs.2800 crores of loss has been caused by the BESCOM itself during the year 2024-25 ;

(d) whether there is an intention to hike the fixed charges from Rs.10 to 20 despite domestic electricity tariff ; the measures taken by the Government to prevent the burden of this price hike on the common people and small scale industries which are already suffering from price hike ?

**K.R. MAHALAKSHMI**
Secretary
Karnataka Legislative Council

Government Press, Vikasa Soudha Unit, Bengaluru, WD - 781 - 600 Copies